# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂ. | 843 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 23.02.2023 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರ ಮದ್ಯ ಖರೀದಿ ಮತ್ತು ಮಾರಾಟಕ್ಕೆ ನಿಗಧಿಪಡಿಸಿದ್ದ 21 ವರ್ಷಗಳ ವಯೋಮಿತಿಯನ್ನು ಸಡಿಲಿಸಿ 18 ವರ್ಷಕ್ಕೆ ಇಳಿಕೆ ಮಾಡುವ ಸಂಬಂಧವಾಗಿ ಯಾವುದಾದರೂ ಆದೇಶ ಹೊರಡಿಸಲಾಗಿದೆಯೇ; | ಸರ್ಕಾರದ ಕರಡು ಅಧಿಸೂಚನೆ-I ಸಂಖ್ಯೆ: FD 9 PES 2022 ದಿನಾಂಕ:09.01.2023ರಲ್ಲಿ ಮದ್ಯ ಖರೀದಿ ಮತ್ತು ಮಾರಾಟಕ್ಕೆ ನಿಗಧಿಪಡಿಸಿದ್ದ 21 ವರ್ಷಗಳ ವಯೋಮಿತಿಯನ್ನು ಸಡಿಲಿಸಿ 18 ವರ್ಷಕ್ಕೆ ಇಳಿಕೆ ಮಾಡಲು ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಕರಡು ಅಧಿಸೂಚನೆಯಿಂದ ಬಾಧಿತರಾದವರು ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ. |
| (ಆ) | ಹಾಗಿದ್ದಲ್ಲಿ, ಈಗಾಗಲೇ ಯುವ ಜನತೆ ಮದ್ಯಪಾನ, ಧೂಮಪಾನ ಮತ್ತಿತರ ದುಶ್ಚಟಗಳಿಗೆ ದಾಸರಾಗುತ್ತಿದ್ದು, ವಯಸ್ಸು ಇಳಿಕೆ ಮಾಡಿದರೆ ಇನ್ನೂ ಹೆಚ್ಚಿನ ಯುವಕರು ಮದ್ಯವ್ಯಸನಿಗಳಾಗುವ ಸಾಧ್ಯತೆ ಹೆಚ್ಚಾಗುತ್ತದೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಅಬಕಾರಿ ಕಾಯ್ದೆ, 1965 ರ ಕಲಂ 36 (1) (ಜಿ) ರನ್ವಯ 18 ವರ್ಷದೊಳಗಿನವರಿಗೆ ಮದ್ಯ ಮಾರಾಟ ಮಾಡುವುದನ್ನು ನಿರ್ಬಂಧಿಸಲಾಗಿದೆ. ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 10(1)(ಇ) ರಲ್ಲಿ 21 ವರ್ಷದೊಳಗಿರುವ ವ್ಯಕ್ತಿಗೆ ಮದ್ಯ ಮಾರಾಟ ಮಾಡಬಾರದೆಂದು ಹೇಳಲಾಗಿದೆ.<br><br>ಅಬಕಾರಿ ಇಲಾಖೆಯ ವಿವಿಧ ಕಾರ್ಯಕ್ಷಮತೆಗಳ ಬಗ್ಗೆ ಪರಿಶೀಲಿಸಲು ಹಾಗೂ ಕರ್ನಾಟಕ ಅಬಕಾರಿ ಕಾಯ್ದೆ, 1965 ಮತ್ತು ಅದರಡಿ ರಚಿಸಲಾಗಿರುವ ನಿಯಮಗಳಲ್ಲಿರುವ ಅಪ್ರಸ್ತುತ (redundant) ಅಂಶಗಳನ್ನು ಗುರುತಿಸಿ, ಕೈಬಿಡಲು ರಚಿಸಲಾಗಿರುವ ಉನ್ನತ ಮಟ್ಟದ ಸಮಿತಿಯ |

| | | |
|---|---|---|
| | | ಶಿಫಾರಸ್ಸಿನಂತೆ, ಕರ್ನಾಟಕ ಅಬಕಾರಿ ಕಾಯ್ದೆ 1965 ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 10(1)(ಇ) ರಲ್ಲಿ ವಯಸ್ಸಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಲಾಗಿರುವ ಅಂಶಗಳಲ್ಲಿ ಇರುವ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ, ಕರಡು ಅಧಿಸೂಚನೆ-I ಸಂಖ್ಯೆ: FD 9 PES 2022 ದಿನಾಂಕ:09.01.2023ರಲ್ಲಿ ಮದ್ಯ ಖರೀದಿ ಮತ್ತು ಮಾರಾಟಕ್ಕೆ ನಿಗಧಿಪಡಿಸಿದ್ದ 21 ವರ್ಷಗಳ ವಯೋಮಿತಿಯನ್ನು ಸಡಿಲಿಸಿ 18 ವರ್ಷಕ್ಕೆ ಇಳಿಕೆ ಮಾಡಲು ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕರಡು ನಿಯಮಗಳ ಕುರಿತು ಬಾಧಿತರಾದವರು ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲು 30 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ.<br><br>ಕರಡು ಅಧಿಸೂಚನೆಯ ಕುರಿತು ಸ್ವೀಕೃತಗೊಳ್ಳುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ನಿಯಮಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. |
| (ಇ) | ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜನರು ಕುಡಿತದ ಚಟಕ್ಕೆ ಬಿದ್ದಿರುವುದರಿಂದ ಕೌಟುಂಬಿಕ ದೌರ್ಜನ್ಯಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಜನರು ಕುಡಿತದ ಚಟಕ್ಕೆ ಬಿದ್ದಿರುವುದರಿಂದ ಕೌಟುಂಬಿಕ ದೌರ್ಜನ್ಯಗಳು ಹೆಚ್ಚಾಗಿರುವುದು ಅಬಕಾರಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. |
| (ಈ) | ಕಳೆದ ಐದು ವರ್ಷಗಳಲ್ಲಿ ಎಷ್ಟು ಮದ್ಯ ಮಾರಾಟವಾಗಿದೆ; ಇದರಿಂದ ಬಂದ ಆದಾಯ ಎಷ್ಟು; ಸರ್ಕಾರದ ನಿರೀಕ್ಷೆ ಎಷ್ಟಿತ್ತು; ಸರ್ಕಾರ ನಿಗಧಿ ಪಡಿಸಿರುವ ಗುರಿಗಿಂತ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ; | ಅಬಕಾರಿ ಇಲಾಖೆಯಿಂದ ಕಳೆದ ಐದು ವರ್ಷಗಳಲ್ಲಿ ಮಾರಾಟವಾದ ಮದ್ಯ ಮತ್ತು ಬಿಯರ್ ಹಾಗೂ ಇದರಿಂದ ಬಂದ ಅಬಕಾರಿ ರಾಜಸ್ವದ ವಿವರಗಳು ಕೆಳಕಂಡಂತಿದೆ. |

| ಕ್ರ ಸಂ. | ವರ್ಷ | ಭಾರತೀಯ ತಯಾರಿಕಾ ಮದ್ಯ (IML) (ವೈನ್ ಮತ್ತು ಲ್ಯಾಬ್ ಸೇರಿದಂತೆ) | | ಬಿಯರ್ | |
|---|---|---|---|---|---|
| | | ಮಾರಾಟ ವಾದ ಮದ್ಯ (ಲಕ್ಷ ಪೆಟ್ಟಿಗೆಗಳಲ್ಲಿ) | ಸಂಗ್ರಹವಾದ ಅಬಕಾರಿ ರಾಜಸ್ವ (ರೂ. ಕೋಟಿಗಳಲ್ಲಿ) | ಮಾರಾಟ ವಾದ ಬಿಯರ್ (ಲಕ್ಷ ಪೆಟ್ಟಿಗೆಗಳಲ್ಲಿ) | ಸಂಗ್ರಹ ವಾದ ಅಬಕಾರಿ ರಾಜಸ್ವ (ರೂ. |

| | | | | | |
|---|---|---|---|---|---|
| | | | | | ಕೋಟಿಗಳಲ್ಲಿ) |
| 1. | 2017–18 | 564.86 | 15,084.30 | 265.77 | 2,151.43 |
| 2. | 2018–19 | 569.92 | 16,894.83 | 300.85 | 2,396.29 |
| 3. | 2019–20 | 600.92 | 17,899.01 | 289.60 | 3,018.90 |
| 4. | 2020–21 | 583.23 | 20,217.80 | 237.82 | 2,438.16 |
| 5. | 2021–22 | 660.16 | 22,899.10 | 268.83 | 2,757.30 |
| 6. | 2022–23 (ಜನವರಿ 2023 ರ ಅಂತ್ಯಕ್ಕೆ) | 518.90 | 20,398.18 | 280.56 | 3,537.43 |

ಸರ್ಕಾರವು ಮದ್ಯ ಮಾರಾಟಕ್ಕೆ ಯಾವುದೇ ಪ್ರತ್ಯೇಕ ಗುರಿಯನ್ನು ನಿಗಧಿ ಪಡಿಸಿರುವುದಿಲ್ಲ. ರಾಜ್ಯ ಸರ್ಕಾರವು ಪ್ರತಿ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಅಬಕಾರಿ ಇಲಾಖೆಗೆ ರಾಜಸ್ವದ ಗುರಿಯನ್ನು ಮಾತ್ರ ನಿಗದಿಪಡಿಸುತ್ತದೆ. ಅಬಕಾರಿ ಇಲಾಖೆಗೆ ಕಳೆದ ಐದು ವರ್ಷಗಳಲ್ಲಿ ನಿಗಧಿಪಡಿಸಿದ ಆರ್ಥಿಕ ಗುರಿ ಹಾಗೂ ಸಂಗ್ರಹವಾದ ಅಬಕಾರಿ ರಾಜಸ್ವದ ವಿವರಗಳು ಕೆಳಕಂಡಂತಿದೆ

(ರೂ.ಕೋಟಿಗಳಲ್ಲಿ)

| ಕ್ರ ಸಂ. | ವರ್ಷ | ಆಯವ್ಯಯದಲ್ಲಿ ನಿಗದಿಪಡಿಸಿದ ಗುರಿ | ಸಂಗ್ರಹಿಸಲಾದ ಅಬಕಾರಿ ರಾಜಸ್ವ | ಆರ್ಥಿಕ ಗುರಿಗೆ ಶೇಕಡಾವಾರು ಸಾಧನೆ (%) |
|---|---|---|---|---|
| 1. | 2017–18 | 17,600.00 | 17,948.51 | 101.98% |
| 2. | 2018–19 | 19750.00 | 19,943.93 | 100.98% |
| 3. | 2019–20 | 20,950.00 | 21,583.95 | 103.03% |
| 4. | 2020–21 | 22,700.00 | 23,332.10 | 102.78% |
| 5. | 2021–22 | 24,580.00 | 26,377.68 | 107.31% |
| 6. | 2022–23 | 29,000.00 (ಆಯವ್ಯಯ ಅಂದಾಜು) | 24,724.27 (ಜನವರಿ 2023 ರ ಅಂತ್ಯಕ್ಕೆ) (ಮರು ಹೊಂದಾಣಿಕೆಗೆ ಒಳಪಟ್ಟಿದೆ). | 85.26% (ಆಯವ್ಯಯ ಅಂದಾಜು) |
| | | 32,000.00 (ಪರಿಷ್ಕೃತ ಗುರಿ) | | 77.26% (ಪರಿಷ್ಕೃತ ಗುರಿ) |

ಮೇಲಿನ ಅವಧಿಯಲ್ಲಿ ನಿಗಧಿಪಡಿಸಿದ ಆರ್ಥಿಕ ಸಾಲಿನ ಗುರಿಯನ್ನು ಪ್ರತಿ ವರ್ಷ ಗುರಿ ಮೀರಿ ಸಾಧಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ನಿಗಧಿಪಡಿಸಿದ ಗುರಿಯನ್ನು ಸಾಧಿಸಲು ಇಲಾಖೆಯು ಕ್ರಮವಹಿಸುತ್ತಿದೆ.

| | | |
|---|---|---|
| (ಉ) | ಸರ್ಕಾರದ ಈ ಕ್ರಮದಿಂದ | ಕರಡು ಅಧಿಸೂಚನೆ-I ಸಂಖ್ಯೆ: FD 9 PES 2022 |

| | | |
|---|---|---|
| | ಸಾರ್ವಜನಿಕರಲ್ಲಿ ಅಸಮಾಧಾನ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ದಿನಾಂಕ:09.01.2023ರಲ್ಲಿ ಮದ್ಯ ಖರೀದಿ ಮತ್ತು ಮಾರಾಟಕ್ಕೆ ನಿಗಧಿಪಡಿಸಿದ್ದ 21 ವರ್ಷಗಳ ವಯೋಮಿತಿಯನ್ನು ಸಡಿಲಿಸಿ 18 ವರ್ಷಕ್ಕೆ ಇಳಿಕೆ ಮಾಡಲು ಹೊರಡಿಸಿರುವ ಕರಡು ನಿಯಮಗಳ ಕುರಿತು ಬಾಧಿತರಾದವರಿಂದ ಸ್ವೀಕೃತಗೊಳ್ಳುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ನಿಯಮಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತದೆ. |

ಆಇ 17 ಇಎಲ್‌ಕ್ಯೂ 2023

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು